3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ , ತುಮಕೂರು

**Spl.C. No.158/2021**

ಪ್ರಾಸಾ 3

ಚಾಸಾ 2

| | |
|---|---|
| ಹೆಸರು | ಹನುಮಂತರಾಯಪ್ಪ |
| ತಂದೆಯ ಹೆಸರು | ಲಿಂಗಪ್ಪ |
| ವಯಸ್ಸು | 45 ವರ್ಷ |
| ಉದ್ಯೋಗ | ಕೂಲಿ ಕೆಲಸ |
| ವಾಸಸ್ಥಳ | ಗೂಲಹಳ್ಳಿ |

ಸಾಕ್ಷಿಯನ್ನು ದಿನಾಂಕ 27.08.2024 ರಂದು ಕರೆಸಿ ಪ್ರಮಾಣೀಕರಿಸಲಾಯ್ತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

1) ಚಾಸಾ.1 ರವರು ನನ್ನ ಅಣ್ಣ. ಚಾಸಾ.3 ರವರು ನನ್ನ ಅಣ್ಣನ ಹೆಂಡತಿ. ನಾವು ಆದಿಕರ್ನಾಟಕ ಜಾತಿಗೆ ಸೇರಿರುತ್ತೇವೆ. ಮೃತ ಸಂಜೀವರಾಯಪ್ಪ ರವರು ಗೊತ್ತು. ಮೃತ ಸಂಜೀವರಾಯಪ್ಪರವರು ಚಾಸಾ.1 ರವರ ಮಗ. ಆರೋಪಿತರು ನಮ್ಮ ಗ್ರಾಮದವರು. 1 ನೇ ಆರೋಪಿ ನಾಯಕ ಜನಾಂಗಕ್ಕೆ ಸೇರಿರುತ್ತಾರೆ. 2 ಮತ್ತು 3 ನೇ ಆರೋಪಿತರು ಕುಂಚಿಟಿಗ ಜಾತಿಗೆ ಸೇರಿರುತ್ತಾರೆ.

2) ಸುಮಾರು 3 ವರ್ಷಗಳ ಹಿಂದೆ ನಮ್ಮ ಊರಿನ ಅಂಗಡಿಯ ಹತ್ತಿರ ಇದ್ದಾಗ ಯಾರೋ ನನಗೆ ಕರೆ ಮಾಡಿ ನನ್ನ ಅಣ್ಣನ ಮಗ ಸಂಜೀವರಾಯಪ್ಪ ಆತ್ಮಹತ್ಯೆ ಮಾಡಿಕೊಂಡಿರುತ್ತಾನೆಂದು ತಿಳಿಸಿರುತ್ತಾರೆ. ನಂತರ ನನ್ನ ಅಣ್ಣನ ಮನೆಯ ಹತ್ತಿರ ಹೋಗಿ ಬೀಗ ಒಡೆದು ನಾನು, ತಿಪ್ಪೇಶರವರು ಒಳಗೆ ಹೋಗಿ ನೋಡಲಾಗಿ ನನ್ನ ಅಣ್ಣನ

ಮಗ ಕಂಬಿಗೆ ನೇಣು ಹಾಕಿಕೊಂಡಿದ್ದ. ಅದು ಶೀಟಿನ ಮನೆ. ಈ ಬಗ್ಗೆ ಪೊಲೀಸರಿಗೆ ಮಾಹಿತಿಯನ್ನು ಕೊಟ್ಟಿದ್ದು ಪೊಲೀಸರು ಸ್ಥಳಕ್ಕೆ ಬಂದು ನೇಣನ್ನು ಬಿಚ್ಚಿಕೊಂಡು ಹೆಣವನ್ನು ಕೆಳಗೆ ಇಳಿಸಿಕೊಂಡಿರುತ್ತಾರೆ. ಯಾವ ಕಾರಣಕ್ಕೆ ಸಂಜೀವರಾಯಪ್ಪ ಆತ್ಮಹತ್ಯೆ ಮಾಡಿಕೊಂಡಿದ್ದ ಎಂದು ನನಗೆ ಗೊತ್ತಿಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿರುವುದಿಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿರುವುದಿಲ್ಲ. ನಾನು ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ.

(ಈ ಹಂತದಲ್ಲಿ ಈ ಸಾಕ್ಷಿಯು ಈ ಹಿಂದೆ ತನಿಖಾಧಿಕಾರಿಯವರ ಮುಂದೆ ನೀಡಿದ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದರಿಂದ ಪ್ರತಿಕೂಲ ಪಕ್ಷಕಾರರು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅನುಮತಿ ನೀಡಬೇಕೆಂದು ಸರ್ಕಾರಿ ಅಭಿಯೋಜಕರು ಭಿನ್ನವಿಸಿರುತ್ತಾರೆ. ಈ ಪ್ರಕರಣದ ಕಾಗದ ಪತ್ರಗಳನ್ನು ಪರಿಶೀಲಿಸಿದಾಗ ಈ ಸಾಕ್ಷಿಯು ತನ್ನ ಹಿಂದಿನ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಪ್ರತಿಕೂಲ ಪಕ್ಷಕಾರನು ತನ್ನ ಪಾಟೀಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅಭಿಯೋಜನೆಗೆ ಅನುಮತಿ ನೀಡುವುದು ಸೂಕ್ತ ಮತ್ತು ನ್ಯಾಯೋಚಿತ ಎಂದು ಮನಗಂಡು ಅನುಮತಿ ನೀಡಲಾಯಿತು)

**ಪಾಟೀಸವಾಲು: ಸರ್ಕಾರಿ ಅಭಿಯೋಜಕರವರಿಂದಃ**

3) ಮೃತ ಸಂಜೀವರಾಯಪ್ಪರವರು ಕೂಲಿ ಕೆಲಸ ಮಾಡುತ್ತಿದ್ದ ಎಂದರೆ ಸರಿ. ದಿನಾಂಕ 18.11.2019 ರಂದು ಬೆಳಿಗ್ಗೆ 11 ಗಂಟೆಗೆ ನಾನು ಮನೆಯಲ್ಲಿದ್ದಾಗ ರುದ್ರೇಶ ರವರು ನನ್ನ ಅಣ್ಣನ ಮಗ ಆತ್ಮಹತ್ಯೆ ಮಾಡಿಕೊಂಡಿರುತ್ತಾನೆಂದು ನನಗೆ ತಿಳಿಸಿರುತ್ತಾರೆ ಎಂದರೆ ಸರಿ. ಕೂಡಲೇ ನಾನು ಮತ್ತು ರುದ್ರೇಶರವರು ನನ್ನ ಅಣ್ಣನ ಮನೆಯ ಹತ್ತಿರ ಹೋಗಿರುತ್ತೇವೆ ಎಂದರೆ ಸರಿ. ಸಂಜೀವರಾಯಪ್ಪರವರು ಮನೆಯಲ್ಲಿ ನೇಣು ಹಾಕಿಕೊಂಡಿರುವ ಬಗ್ಗೆ ನಾನು ಚಾಸಾ.1 ರವರಿಗೆ ಕರೆ ಮಾಡಿ ತಿಳಿಸಿರುತ್ತೇನೆ ಎಂದರೆ ಸರಿ. ಸಂಜೀವರಾಯಪ್ಪರವರ ಕಾಲಿನ ಪಕ್ಕದಲ್ಲಿ ಒಂದು ಚೀಟಿ ಬಿದ್ದಿತ್ತು ಎಂದರೆ ಸರಿಯಲ್ಲ. ಅಲ್ಲಿಗೆ 3 ನೇ ಆರೋಪಿ ಸಹ ಬಂದಿದ್ದ ಎಂದರೆ ಸರಿ. ನನಗೆ ಓದಲು ಬರುತ್ತಿರಲಿಲ್ಲ ಎಂದರೆ ಸರಿ. ಸ್ಥಳದಲ್ಲಿ ಸಿಕ್ಕ ಚೀಟಿಯನ್ನು ನಾನು 3 ನೇ ಆರೋಪಿಗೆ

ಕೊಟ್ಟು ಓದುವಂತೆ ಹೇಳಿದೆ ಎಂದರೆ ಸರಿಯಲ್ಲ. ಆ ಚೀಟಿಯನ್ನು 3 ನೇ ಆರೋಪಿಯು ಓದಿದಾಗ "1 ಮತ್ತು 2 ನೇ ಆರೋಪಿತರು ನನ್ನ ಸಾವಿಗೆ ಕಾರಣ ಎಂದು ಬರೆದಿತ್ತು" ಎಂದರೆ ಸರಿಯಲ್ಲ. 3 ನೇ ಆರೋಪಿಯು ಆ ಚೀಟಿಯನ್ನು ಓದಿ ಹರಿದು ಹಾಕಿ ಸ್ಥಳದಿಂದ ಹೊರಟುಹೋದ ಎಂದರೆ ಸರಿಯಲ್ಲ.

4) ನಂತರ ವಿಚಾರ ತಿಳಿಯಲಾಗಿ ಸಂಜೀವರಾಯಪ್ಪರವರು ಸುಮಾರು 20 ದಿನಗಳ ಹಿಂದೆ ನಮ್ಮ ಊರಿನ ಅಶ್ವತ ಕಟ್ಟೆಯ ಕಡೆಯಿಂದ ಬರುತ್ತಿರುವಾಗ 1 ನೇ ಆರೋಪಿಯ ಹೆಂಡತಿ ಸಂಜೀವರಾಯಪ್ಪರವರಿಗೆ ಏನೋ ಮಾತನಾಡಿದ ಎಂದು ಬೈದುಕೊಂಡು ಹೋದಳಂತೆ , ಬಳಿಕ ಈ ವಿಚಾರವನ್ನು 1 ನೇ ಆರೋಪಿಯ ಹೆಂಡತಿ ತನ್ನ ಗಂಡನಿಗೆ ಹೇಳಿದ್ದು ಅವರು ಮತ್ತು ಅವರ ಮನೆಯಲ್ಲಿ ಬಾಡಿಗೆಗೆ ಇರುವ 2 ನೇ ಆರೋಪಿ ಸೇರಿ ದಿನಾಂಕ 17.11.2019 ರಂದು ರಾತ್ರಿ 8 ಗಂಟೆಗೆ ನಮ್ಮೂರಿನ ಅಶ್ವತ ಕಟ್ಟೆಯ ಬಳಿ ಸಂಜೀವರಾಯಪ್ಪರವರ ಮೇಲೆ ಗಲಾಟೆ ಮಾಡಿ ಅವಾಚ್ಯ ಶಬ್ದಗಳಿಂದ ಬೈದು ಕೈಗಳಿಂದ ಮೈಕೈಗೆ ಹೊಡೆದು ನನ್ನ ಮಗನೇ ಇನ್ನೊಂದು ಸಾರಿ ನನ್ನ ತಂಟೆಗೆ ಬಂದರೆ ನಿನ್ನನ್ನು ಸಾಯಿಸುತ್ತೇನೆ ಎಂದು ಪ್ರಾಣ ಬೆದರಿಕೆ ಹಾಕಿದ್ದರಂತೆ, ಇಷ್ಟಕ್ಕೂ ಸುಮ್ಮನಾಗದೇ 1 ಮತ್ತು 2 ನೇ ಆರೋಪಿತರು ದಿಃ18.11.19 ರಂದು ಬೆಳಿಗ್ಗೆ 10 ಗಂಟೆಗೆ ಪುನಃ ಸಂಜೀವರಾಯಪ್ಪರವರ ಮನೆಯ ಬಳಿ ಹೋಗಿ ಮನೆಯ ಬಳಿ ಇದ್ದ ಸಂಜೀವರಾಯಪ್ಪರವರ ಮೇಲೆ ಗಲಾಟೆ ಮಾಡಿ ಬೈದು ಕೈಗಳಿಂದ ಹೊಡೆದು ನನ್ನ ಮಗನೇ ನೀನು ಸತ್ತಾದರೂ ಸಾಯಿ, ಊರಿನಲ್ಲಿ ಏಕಿದ್ದೀಯಾ ಎಂದು ಕಿರುಕುಳ ನೀಡಿದ್ದರಂತೆ , ಆದ್ದರಿಂದ ಸಂಜೀವರಾಯಪ್ಪರವರು 1 ಮತ್ತು 2 ನೇ ಆರೋಪಿತರ ಪ್ರಚೋದನೆಯಿಂದ ದಿಃ 18.11.19 ರಂದು ತನ್ನ ಮನೆಯಲ್ಲಿ ಯಾರೂ ಇಲ್ಲದೇ ಇದ್ದಾಗ ಬೆಳಿಗ್ಗೆ 10 ರಿಂದ 11 ಗಂಟೆ ಸಮಯದಲ್ಲಿ ತನ್ನ ಮನೆಯ ರೂಮಿನಲ್ಲಿ ಮೇಲ್ಛಾವಣಿಯ ಶೀಟಿಗೆ ಅಡ್ಡಲಾಗಿ ಹಾಕಿದ್ದ ಕಬ್ಬಿಣದ ಪೈಪಿಗೆ ವೇಲ್ ಬಟ್ಟೆಯಿಂದ ನೇಣು ಬಿಗಿದುಕೊಂಡು ಮೃತಪಟ್ಟಿರುತ್ತಾನೆಂದು ಈಗ ನನಗೆ ಓದಿ ಹೇಳಿದ ನಿಪಿ.4 ರಂತೆ ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳಿಗೆ ಸಹಾಯ

ಮಾಡುವ ಸಲುವಾಗಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.3 ನ್ನು 3 ನೇ ಆರೋಪಿಯು ಹರಿದು ಹಾಕಿರುತ್ತಾರೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿ ಪರ ಶ್ರೀ.B.K.P.S. ವಕೀಲರಿಂದ :**

4) ಸಂಜೀವರಾಯಪ್ಪರವರಿಗೆ ಓದಲು ಮತ್ತು ಬರೆಯಲು ಬರುತ್ತಿರಲಿಲ್ಲ ಎಂದರೆ ಸರಿ. ನನ್ನ ಅಣ್ಣನಿಗೆ ಎರಡು ಮದುವೆ ಎಂದರೆ ಸರಿ. ಅವರ ಮೊದಲನೇ ಹೆಂಡತಿಯ ಮಗ ಸಂಜೀವರಾಯಪ್ಪ ಎಂದರೆ ಸರಿ. ಮೃತ ಸಂಜೀವರಾಯಪ್ಪ ಮತ್ತು ಚಾಸಾ.5 ರವರು ಯಾವುದೇ ಕೆಲಸ ಮಾಡದೇ ಕುಡಿದು ಊರಿನಲ್ಲಿ ಓಡಾಡುತ್ತಿದ್ದರು ಎಂದರೆ ಸರಿ. 2, 3 ನೇ ಆರೋಪಿತರು ಮತ್ತು ನಾನು ಬುದ್ದಿವಾದ ಹೇಳಿದೆವು ಎಂದರೆ ಸರಿ. ಆದ್ದರಿಂದ, ಮೃತ ಸಂಜೀವರಾಯಪ್ಪ 2 ಮತ್ತು 3 ನೇ ಆರೋಪಿತರನ್ನು ಮಾತನಾಡಿಸುವುದನ್ನು ಬಿಟ್ಟು ದ್ವೇಷ ಸಾಧಿಸುತ್ತಿದ್ದ ಎಂದರೆ ಸರಿ. ಸಂಜೀವರಾಯಪ್ಪರವರು ಕುಡಿದು ಮನೆಯಲ್ಲಿ ನೇಣು ಹಾಕಿಕೊಂಡಿರುತ್ತಾನೆಂದು ನಂತರ ನನಗೆ ಗೊತ್ತಾಯಿತು ಎಂದರೆ ಸರಿ. ಚಾಸಾ.1 ರವರಿಗೆ ಓದಲು ಮತ್ತು ಬರೆಯಲು ಬರುವುದಿಲ್ಲವಾದ್ದರಿಂದ ಅದನ್ನು ದುರುಪಯೋಗಪಡಿಸಿಕೊಂಡು ಚಾಸಾ.5 ರವರು ಆರೋಪಿತರ ಮೇಲೆ ಸುಳ್ಳು ಪ್ರಕರಣವನ್ನು ದಾಖಲು ಮಾಡಿಸಿದ್ದಾರೆ ಎಂದರೆ ಸರಿ. ಆರೋಪಿತರು ಸಂಜೀವರಾಯಪ್ಪರವರ ತಂಟೆಗೆ ಹೋಗುತ್ತಿರಲಿಲ್ಲ ಎಂದರೆ ಸರಿ. ನೇಣನ್ನು ಇಳಿಸಿಕೊಳ್ಳುವಾಗ ಕುಡಿದಿರುವ ವಾಸನೆ ಬರುತ್ತಿತ್ತು.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಎ ಒ

3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತುಮಕೂರು.

ಸಾಕ್ಷಿಯ ಸಹಿ